# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-01

Cw-01

| | |
|---|---|
| ಸಾಕ್ಷಿದಾರರ ಹೆಸರುಃ | ಸಂಜೀವ ಶಿರಗುಪ್ಪಿ |
| ತಂದೇಗಂಡನ ಹೆಸರುಃ | ಬೆನ್ನಪ್ಪ |
| ವಯಸ್ಸುಃ | 28 ವರ್ಷ |
| ಉದ್ಯೋಗಃ | ಕೂಲಿ |
| ವಾಸ ಸ್ಥಳಃ | ಹಾವೇರಿ |

**ದಿನಾಂಕ:21.03.2024 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಕೊಲೆಯಾದ ನಿಂಗಪ್ಪ ನನ್ನ ಅಣ್ಣ. ಕೊಲೆಯಾದ ಇನ್ನೊಬ್ಬ ಗಣೇಶ ನನ್ನ ಅಣ್ಣನ ಜೊತೆ ಓಡಾಡುತ್ತಿದ್ದ ಹುಡುಗ. ಆರೋಪಿಗಳು ಗೊತ್ತು. ನನ್ನ ಅಣ್ಣ ನಿಂಗಪ್ಪ ಯತ್ತಳ್ಳಿಯಲ್ಲಿ ಮಳೀಮಠ ಕಾಂಪ್ಲೆಕ್ಸನಲ್ಲಿ ಮಲಗಲು ಹೋಗುತ್ತಿದ್ದ. ಸದರಿ ಕಾಂಪ್ಲೆಕ್ಸನ್ನು 1 ನೇ ಆರೋಪಿ ಬಾಡಿಗೆಗೆ ತೆಗೆದುಕೊಂಡಿದ್ದ.

ದಿನಾಂಕಃ16.03.2021 ರಂದು ಸಂಜೆ 7.30 ಗಂಟೆ ಸುಮಾರಿಗೆ ನಾನು ಕೆ.ಎಸ್.ಆರ್.ಟಿ.ಸಿ ಬಸ್ ನಲ್ಲಿ ಹಾವೇರಿಯಿಂದ ರಾಣೇಬೆನೂನರಿಗೆ ಹೋಗುತ್ತಿದ್ದಾಗ. ಸದರಿ ಬಸ್ ಹಾವೇರಿಯ ವೀರಾಪುರ ಆಸ್ಪತ್ರೆ ಹತ್ತಿರ ಬರುತ್ತಿರುವಾಗ 1 ನೇ ಆರೋಪಿ, ರವಿ ನಮ್ಮ ಅಣ್ಣ ನಿಂತಿದ್ದರು. ಆಗ 1 ನೇ ಆರೋಪಿ ಪೋನಿನಲ್ಲಿ ಬಾಯಿ ಮಾಡುತ್ತಿದ್ದ. ನಾನು ನನ್ನ ಅಣ್ಣನ ಸ್ನೇಹಿತ ಖಲಂದರ್ ಗೆ ಪೋನ್ ಮಾಡಿ ಯಾಕೆ ಬಾಯಿ ಮಾಡುತ್ತಿದ್ದಾರೆ ತಿಳಿದುಕೊಂಡು ನನಗೆ ಹೇಳು ಅಂತಾ ಹೇಳಿದೆ. ಖಲಂದರ್ 10 ನಿಮಿಷದ ನಂತರ ಪೋನ್ ಮಾಡಿ

1 ನೇ ಆರೋಪಿ ಮತ್ತು ಹೊಸರಿತ್ತಿಯ ಲಾರಿಯವನಿಗೂ ಬಾಂಬೆ ಗ್ಯಾರೇಜ್ ಹತ್ತಿರ ಜಗಳವಾಗಿದೆ ಅಂತಾ ಹೇಳಿದ. ಅದಕ್ಕೆ ನಮ್ಮ ಅಣ್ಣನನ್ನು ಕರೆದುಕೊಂಡು ಹೋಗಿದ್ದಾರೆ ಅಂತಾ ಹೇಳಿದ. ನಾನು ರಾಣೇಬೆನ್ನೂರಿಗೆ ಹೋಗಿ ರಾತ್ರಿ 10.30 ಗಂಟೆಗೆ ವಾಪಸ್ ಬಂದೆ.

ಮಾರನೇ ದಿನ ಬೆಳಿಗ್ಗೆ 9.00 ಗಂಟೆಗೆ ರವಿ ಕರಿಗಾರ-ಚಾಸಾ-18 ಫೋನ್ ಮಾಡಿ 1 ನೇ ಆರೋಪಿಯ ಆಫೀಸ್ ನಲ್ಲಿ ನಿಮ್ಮ ಅಣ್ಣನ ಹಾಗೂ ಗಣೇಶನ ತಲೆ ಒಡೆದಿದೆ, ರಕ್ತ ಬಂದಿದೆ, ಅವರಿಗೆ ಎಚ್ಚರ ಇಲ್ಲ ನೀನು ಬೇಗ ಬಾ ಅಂತಾ ಹೇಳಿದ. ನಾನು ಮತ್ತು ಯಲ್ಲಪ್ಪ ಕೂಡಲೇ ಹೋಗಿ ನೋಡಿದಾಗ ಗಣೇಶ ಮತ್ತು ನಮ್ಮ ಅಣ್ಣ ಮಲಗಿದ ಸ್ಥಿತಿಯಲ್ಲಿದ್ದರು, ಮಲಗಿದ್ದ ಜಾಗದಲ್ಲಿ, ಗೋಡೆಗೆ, ಹಾಸಿಗೆಯಲ್ಲಿ ರಕ್ತವಾಗಿತ್ತು. ಬೇರೆ ಜನರು ಸೇರಿದ್ದರು. ನನಗೆ ಗಾಬರಿಯಾಗಿ ಪೊಲೀಸರಿಗೆ ಫೋನ್ ಮಾಡಿದೆ. ಪೊಲೀಸರು ಬಂದು ನೋಡಿದರು. ನಂತರ ಪೊಲೀಸರಿಗೆ ನಾನು ದೂರು ಕೊಟ್ಟಿದ್ದೇನೆ. ದೂರನ್ನು ನಿಪಿ-1, ಸಾಕ್ಷಿ ಸಹಿ ನಿಪಿ-1(ಎ), ಎಫ್ ಐ ಆರ್ ನಿಪಿ-2 ಅಂತಾ ಗುರುತಿಸಲಾಯಿತು.

ದಿನಾಂಕಃ17.03.2021 ರಂದು ಪೊಲೀಸರು ಸ್ಥಳಕ್ಕೆ ಬಂದರು ನಾನೇ ಸ್ಥಳ ತೋರಿಸಿದ್ದೇನೆ. ಸ್ಥಳದಲ್ಲಿ ಪೊಲೀಸರು ಪಂಚನಾಮೆಗಳನ್ನು ಮಾಡಿದರು. ಸದರಿ ಸ್ಥಳ ಪಂಚನಾಮೆಯನ್ನು ನಿಪಿ-3, ಸಾಕ್ಷಿ ಸಹಿ ನಿಪಿ-3(ಎ) ಅಂತಾ ಗುರುತಿಸಲಾಯಿತು. ನಿಪಿ-3 ರ ಮುಖಾಂತರ ಒಂದು ರಕ್ತ ಹತ್ತಿದ ರಗ್ಗು ಒಂದು ಕಪ್ಪು ಬಣ್ಣದ ಸ್ಯಾಂ ಸಂಗ್ ಕಂಪನಿ ಮೊಬೈಲ್, ರಕ್ತ ಮಾದರಿಯ ಪೌಡರ್ , ಇನ್ನೊಂದು ರಕ್ತ ಹತ್ತಿದ ರಗ್ಗು ರಕ್ತದ ಮಾದರಿಯ ಪೌಡರ್, ಒಂದು ವಿವೋ ಕಂಪನಿ ಮೊಬೈಲ್, ಸ್ಟೀಲ್ ಕೋಟೆಡ್ ಕಬ್ಬಿಣದ ಡಂಬಲ್ಸ್ ನ್ನು ಅಮಾನತ್ತುಪಡಿಸಿಕೊಂಡಿದ್ದು ಅವುಗಳನ್ನು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮಾ-1 ರಿಂದ 7 ಅಂತಾ ಗುರುತಿಸಲಾಯಿತು. ನಮ್ಮ ಅಣ್ಣ ಸ್ಯಾಂ ಸಂಗ್ ಕಂಪನಿ ಮೊಬೈಲ್ ಬಳಸುತ್ತಿದ್ದ. ಗಣೇಶ ವಿವೋ ಕಂಪನಿ ಮೊಬೈಲ್

ಬಳಸುತ್ತಿದ್ದ. ಸ್ಥಳದಲ್ಲಿ ಕಚ್ಚಾ ನಕಾಶೆ ತಯಾರಿಸಿರುತ್ತಾರೆ. ನಕಾಶೆಯನ್ನು ನಿಪಿ-4, ಸಾಕ್ಷಿ ಸಹಿ ನಿಪಿ-4(ಎ) ಅಂತಾ ಗುರುತಿಸಲಾಯಿತು. ಸ್ಥಳದಲ್ಲಿ ಫೋಟೋ ತೆಗೆದಿದ್ದು ಅವುಗಳನ್ನು ನಿಪಿ-5 ರಿಂದ 10 ಅಂತಾ ಗುರುತಿಸಲಾಯಿತು.

ಅದೇ ದಿನ ಪೊಲೀಸರು ಮೃತ ನಿಂಗಪ್ಪ ಮತ್ತು ಗಣೇಶನ ಶವ ಪಂಚನಾಮೆ ಮಾಡಿರುತ್ತಾರೆ. ಮೃತ ಗಣೇಶನ ಶವ ಪಂಚನಾಮೆಯನ್ನು ನಿಪಿ-11, ಸಾಕ್ಷಿ ಸಹಿ ನಿಪಿ-11(ಎ) ಅಂತಾ ಗುರುತಿಸಲಾಯಿತು. ಫೋಟೋಗಳನ್ನು ನಿಪಿ-12 ರಿಂದ 14 ಅಂತಾ ಗುರುತಿಸಲಾಯಿತು. ಮೃತ ನಿಂಗಪ್ಪನ ಶವ ಪಂಚನಾಮೆಯನ್ನು ನಿಪಿ-15, ಸಾಕ್ಷಿ ಸಹಿ ನಿಪಿ-15(ಎ) ಅಂತಾ ಗುರುತಿಸಲಾಯಿತು. ಫೋಟೋಗಳನ್ನು ನಿಪಿ-16 ರಿಂದ 18 ಅಂತಾ ಗುರುತಿಸಲಾಯಿತು.

ಪೊಲೀಸರು ನನ್ನ ಮರು ಹೇಳಿಕೆ ಮಾಡಿಕೊಂಡರು. ಆರೋಪಿಗಳು ಡಂಬಲ್ಸ ಮತ್ತು ಮೋಟಾರ್ ಸೈಕಲ್ ಪೋರ್ಕ ರಾಡ್, ವೀಲ್ ಪಾನದಿಂದ ಹೊಡೆದು ಕೊಲೆ ಮಾಡಿದ್ದಾರೆ ಅಂತಾ ಗೊತ್ತಾಯಿತು. ಮೋಟಾರ್ ಸೈಕಲ್ ಪೋರ್ಕ ರಾಡ್ ಮತ್ತು ವೀಲ್ ಪಾನವನ್ನು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತಿದ್ದು ಅವುಗಳನ್ನು ಕ್ರಮವಾಗಿ ಮುಮಾ-8 ಮತ್ತು 9 ಅಂತಾ ಗುರುತಿಸಲಾಯಿತು.

**ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.